OS 11/2017
DW-01

**ದಿನಾಂಕಃ 27-06-2026.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ 21 ನೇ ಪ್ರತಿವಾದಿ ಪರ ಶ್ರೀ SVK ಮಾನ್ಯ ವಕೀಲರಿಂದ**

ಸದರಿ ಶಂಕ್ರಪ್ಪ ಹಾಗೂ ಸಿದ್ದಲಿಂಗಪ್ಪ ಇವರು ಸುಮಾರು 70 ವರ್ಷಗಳ ಮುಂಚಿತವಾಗಿನೇ ಸ್ವತ್ತುಗಳಲ್ಲಿ ವಿಭಾಗವಾಗಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದಲ್ಲಿ ದಾವಾ ಅನುಸೂಚಿ ಎಂ ಹಾಗೂ ಸ.ನಂ.129 ಇದು ಸದರಿ ಸಿದ್ದಲಿಂಗಪ್ಪ ಇವರ ಪಾಲಿಗೆ ಬಂದಿದ್ದವು ಎಂದರೆ ಸರಿ. ಸದರಿ ಸಿದ್ದಲಿಂಗಪ್ಪ ಇವರು ತಮ್ಮ ಜೀವಿತ ಕಾಲದವರೆಗೂ ಸದರಿ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿ. ಸದರಿ  ಸಿದ್ದಲಿಂಗಪ್ಪ ಇವರು ತೀರಿಕೊಂಡ ನಂತರ ಅವರ ಮಗನಾದ 21 ನೇ ಪ್ರತಿವಾದಿಯವರು ಸದರಿ ಸ್ವತ್ತುಗಳ ಸ್ವಾಧೀನಾನುಭವದಲ್ಲಿರುತ್ತಾರ ಎಂದರೆ ಸರಿ.

**ಪಾಟಿ ಸವಾಲುಃ ವಾದಿಗಳ ಪರ ಶ್ರೀ RMH ಮಾನ್ಯ ವಕೀಲರಿಂದ**

2. ನಾನು master degree ಪದವೀಧರ. ನಾನು ಖಾಸಗಿ ಬ್ಯಾಂಕಿನ ಉದ್ಯೋಗಿ ಆಗಿರುತ್ತೇನೆ. ಸದರಿ ಶಂಕ್ರಪ್ಪಗೌಡ ಹಾಗೂ ಸಿದ್ದಲಿಂಗಪ್ಪ ಇವರು ಸುಮಾರು 70 ವರ್ಷಗಳ ಹಿಂದೆ ವಿಭಾಗವಾಗಿದ್ದು ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ. ಸದರಿಯವರು 70 ವರ್ಷಗಳ ಹಿಂದೆ ವಿಭಾಗವಾಗಿರುವುದಕ್ಕೆ ನಾನು ದಾಖಲೆಗಳನ್ನು ನೋಡಿರುತ್ತೇನೆ. ನಾನು ನೋಡಿರುವ ಕಾಗದ ಪತ್ರ ಎಂದರೆ ವಿಭಾಗ ಪತ್ರ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ನಮ್ಮ ತಂದೆಯವರು ತಮ್ಮ ಜೀವಿತ ಕಾಲಾವಧಿಯಲ್ಲಿ ನನಗೆ ಸದರಿ ಕಾಗದ ಪತ್ರವನ್ನು ತೋರಿಸಿರುತ್ತಾರೆ. ನನ್ನ ತಂದೆಯವರು missing ಆಗಿ 06 ವರ್ಷಗಳಾಗಿರುತ್ತವೆ. ನನ್ನ ತಂದೆಯವರು ಕೃಷ್ಣಾ

ನದಿಯಲ್ಲಿ missing ಆಗಿರುತ್ತಾರೆ. ನನ್ನ ತಂದೆಯವರು ನದಿಯಲ್ಲಿರುವ ಎಮ್ಮೆಗಳನ್ನು ಕರೆ ತರಲು ಹೋದಾಗ ಪ್ರಳಯ ಬಂದು ನದಿಯಲ್ಲಿ ಕೊಚ್ಚಿಕೊಂಡು ಹೋಗಿರುತ್ತಾರೆ ಎಂದು ಗ್ರಾಮಸ್ತರು ಹೇಳುತ್ತಾರೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಸದರಿ ವಿಚಾರವೇ ಪ್ರಚಲಿತದಲ್ಲಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಎಲ್ಲಿರುತ್ತಾರೆ ಎಂದು ಈ ದಿನದವರೆಗೂ ಹುಡುಕಾಟ ಮಾಡಿರುತ್ತೇನೆ. ನನ್ನ ತಂದೆಯವರನ್ನು ಹುಡುಕಿ ಕೊಡಲು ನಾನು ಪೊಲೀಸರಿಗೆ ಹಾಗೂ ತಹಶೀಲ್ದಾರ ಇವರಿಗೆ ಅರ್ಜಿಯನ್ನು ಕೊಟ್ಟಿದ್ದು ಅವುಗಳ ಪ್ರತಿಯನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ತಂದೆಯವರು ಕೃಷಿ ಕೆಲಸವನ್ನು ಮಾಡಿಕೊಂಡಿದ್ದರು ಎಂದರೆ ಸರಿ. ನನ್ನ ತಂದೆಯವರು missing ಆಗಿದ್ದಾಗ ಅವರ ವಯಸ್ಸು 60 ವರ್ಷ ಇತ್ತು. ನಮ್ಮ ತಂದೆಯವರಿಗೆ ಸದರಿ ಕೃಷಿ ಕೆಲಸ ಬಿಟ್ಟರೇ ಬೇರೆ ಕೆಲಸ ಗೊತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ತಮ್ಮ ತಂದೆಯವರು ಒಂದು ಕಿರಾಣಿ ಅಂಗಡಿಯನ್ನು ಹೊಂದಿದ್ದರು ಎಂದು ಹೇಳುತ್ತಾರೆ. ನನ್ನ ತಂದೆಯವರು ನದಿಯಲ್ಲಿ ಕೊಚ್ಚಿಕೊಂಡು ಹೋಗಿ ತೀರಿಕೊಂಡ ವಿಚಾರ ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸದರಿ ವಿಭಾಗದಲ್ಲಿ ಸದರಿ ಶಂಕ್ರಪ್ಪ ಇವರ ಪಾಲಿಗೆ ಸ.ನಂ.26, 28, 1, 86, 128, 129, 131 ಹಾಗೂ 40 ಇವುಗಳು ಬಂದಿದ್ದದು, ಇನ್ನು ಸರ್ವೆ ನಂಬರುಗಳು ಬಂದಿದ್ದ ನನಗೆ ಅವುಗಳ ಸಂಖ್ಯೆ ನೆನಪಿರುವುದಿಲ್ಲ. ಸದರಿ ಸ.ನಂ.26 ಕ್ಷೇತ್ರ 16 ಎಕರೆ, ಸ.ನಂ.28 ಕ್ಷೇತ್ರ 06 ಎಕರೆ, ಸ.ನಂ.1 ಕ್ಷೇತ್ರ 08 ಎಕರೆ, ಸ.ನಂ.86 ಕ್ಷೇತ್ರ 08 ಎಕರೆ, ಸ.ನಂ.128 ಕ್ಷೇತ್ರ ಗೊತ್ತಿರುವುದಿಲ್ಲ, ಸ.ನಂ.129 ಕ್ಷೇತ್ರ

14 ಎಕರೆ 05 ಗುಂಟಾ, ಸ.ನಂ. 131 ರ ಕ್ಷೇತ್ರ ನನಗೆ ನೆನಪಿರುವುದಿಲ್ಲ, ಸ.ನಂ.40 ಕ್ಷೇತ್ರ 10 ಎಕರೆ ಇರುತ್ತವೆ.

4. ಸದರಿ ವಿಭಾಗದಲ್ಲಿ ಸದರಿ ಸಿದ್ದಲಿಂಗಪ್ಪ ಇವರಿಗೆ ಯಾವ ಯಾವ ಸರ್ವೆ ನಂಬರಗಳು ಹಾಗೂ ಕ್ಷೇತ್ರ ಬದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗದಲ್ಲಿ ಸ.ನಂ.129 ಹಾಗೂ 131/3 ಯಾರಿಗೆ ಬಂದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸರ್ವೆ ನಂಬರುಗಳು ವಿಭಾಗವಾಗಿದ್ದರಿಂದ ನನಗೆ ನಮಗೆ ಬಂದಂತಹ ಸರ್ವೆ ನಂಬರ ಮಾತ್ರ ತಿಳಿದಿರುತ್ತವೆ. ಪಹಣಿ ಹಾಗೂ ನಾವು ಉಳಿಮೆ ಮಾಡುತ್ತಿರುವ ಸರ್ವೆ ನಂಬರುಗಳ ಆಧಾರ ಮೇಲೆ ಸ.ನಂ. 129 ಹಾಗೂ 131/3 ಸದರಿ ಸಿದ್ದಲಿಂಗಪ್ಪ ಇವರ ಪಾಲಿಗೆ ಬಂದಿರುತ್ತವೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ಎರಡು ಸರ್ವೆ ನಂಬರುಗಳು ಸಿದ್ದಲಿಂಗಪ್ಪ ಹಾಗೂ ಸಿದ್ದಣ್ಣಗೌಡ ಇವರ ಹೆಸರಿನಲ್ಲಿರುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ಹಾಗೂ ವಾದಿ ಶಾಮಿಲಾಗಿ ಸದರಿ ಎರಡು ಸರ್ವೆ ನಂಬರುಗಳು ಸಿದ್ದಲಿಂಗಪ್ಪ ಇವರಿಗೆ ಬಂದಿದ್ದು ಅವರು ತೀರಿಕೊಂಡ ನಂತರ 21 ನೇ ಪ್ರತಿವಾದಿ ಅವುಗಳ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 70 ವರ್ಷಗಳ ಹಿಂದೆ ಆಗಿರುವ ಸದರಿ ವಿಭಾಗದಂತೆ ಶಂಕ್ರಪ್ಪ ಇವರ ಪಾಲಿಗೆ ಬಂದಂತಹ ಸ್ವತ್ತುಗಳು ಅವರ ಹೆಸರಿಗೆ ಆಗಿರುತ್ತವೆ ಎಂದರೆ ಸರಿ. ಸದರಿ ಶಂಕ್ರಪ್ಪ ಇವರ ಹೆಸರಿನಲ್ಲಿ ಅವರ ಸದರಿ ಸ್ವತ್ತುಗಳು ವರ್ಗಾವಣೆ ಆಗಿರುತ್ತವೆಯೋ ಇಲ್ಲವೋ ನನಗೆ ಗೊತ್ತಿಲ್ಲ ಆದರೆ ಅವರು ಸದರಿ ಸ್ವತ್ತುಗಳನ್ನು ಉಳಿಮೆ ಮಾಡುತ್ತಿದ್ದರು. ನಾನು ಸದರಿ ಶಂಕ್ರಪ್ಪ ಇವರನ್ನು ನೋಡಿರುವುದಿಲ್ಲ. ನನ್ನ ಸದರಿ ತಾತ ಶಂಕ್ರಪ್ಪ ಇವರು ಯಾವಾಗ ಕಾಲವಾಗಿರುತ್ತಾರೆ ಎಂದು ಗೊತ್ತಿರುವುದಿಲ್ಲ.

ಸದರಿ ಶಂಕ್ರಪ್ಪ ಇವರು ತೀರಿಕೊಂಡ ನಂತರ ಅವರ ಸ್ವತ್ತುಗಳು ಅವರ ಮಕ್ಕಳ ಹೆಸರಿಗೆ ವರ್ಗಾವಣೆಯಾಗಿರುತ್ತವೆ.

5. ವಾದಿಗಳು ಪ್ರಸ್ತುತ ದಾವೆಯನ್ನು ಸುಮಾರು 160 ಎಕರೆ ಹೊಲಗಳ ಮೇಲೆ ಮಾಡಿರುತ್ತಾರೆ ನನಗೆ ಸದರಿ ಕ್ಷೇತ್ರದ ಸರ್ವೆ ನಂಬರುಗಳು ಗೊತ್ತಿರುವುದಿಲ್ಲ ಹಾಗೂ ಅವುಗಳ ಅಳತೆ ನಿಖರವಾಗಿ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳು ಸನ್ 2025-26 ನೇ ಸಾಲಿಗಾದಂತೆ ಯಾರ ಹೆಸರಿನಲ್ಲಿರುತ್ತದೆ ಎಂದು ಸ್ವಲ್ಪ ಮಟ್ಟಿಗೆ ಗೊತ್ತಿರುತ್ತದೆ. ಸದರಿ 70 ವರ್ಷಗಳ ಹಿಂದೆ ವಿಭಾಗವಾಗಿದ್ದಾಗ ನನ್ನ ತಂದೆಯವರು ಇದ್ದರು. ಸದರಿ ವಿಭಾಗ ಪತ್ರವನ್ನು ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಬಲ್ಲೆ. ಸದರಿ ವಿಭಾಗ ಪತ್ರ ಯಾರ ಹತ್ತಿರ ಇರುತ್ತದೇ ಎಂದು ನನಗೆ ಖಚಿತವಾಗಿ ಗೊತ್ತಿರುವುದಿಲ್ಲ. ಯಾವುದೇ ವಿಭಾಗವಾಗದೇ ಇದ್ದರೂ ಕೂಡಾ ನಾನು ಹಾರಿಕೆ ಉತ್ತರಗಳನ್ನು ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

6. ಇವತ್ತಿನವೆರಗೂ ಸದರಿ ಶಂಕ್ರಪ್ಪ ಇವರ ಮಕ್ಕಳು ತಮ್ಮ ಸ್ವತ್ತುಗಳಲ್ಲಿ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆದರೆ ನನಗೆ ಸದರಿಯವರು ಯಾವಾಗ ವಿಭಾಗವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಸದರಿ ವಿಭಾಗವಾಗಿರುವುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ.

**ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.